ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

4

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ  ದಿನಾಂಕ : DATE 7/12/20

# ಬಿಎಸ್‌ವೈಗೆ ಕಲಾಪದ ಅಗ್ನಿಪರೀಕ್ಷೆ

7/12/20

- ಒಡೆದ ಮನೆಯಾಗಿರುವ ಬಿಜೆಪಿಯಲ್ಲಿ ನಿರುತ್ಸಾಹ
- ಸಿಎಂ ಯಡಿಯೂರಪ್ಪಗೆ ವಿಪಕ್ಷಕ್ಕಿಂತ ಸ್ವಪಕ್ಷದ್ದೇ ಚಿಂತೆ
- ಎಪಿಎಂಸಿ, ಭೂ ಸುಧಾರಣಾ ಮಸೂದೆಗಳೂ ಬಾಕಿ

**ಸಂ.ಕ.ಸಮಾಚಾರ ಬೆಂಗಳೂರು**

ಹಲವಾರು ಆಡಳಿತಾತ್ಮಕ ಸವಾಲುಗಳನ್ನು ಮುಂದೊಡ್ಡಿ ಸರ್ಕಾರವನ್ನು ಹಣಿಯಲು ಮುಂದಾಗಿರುವ ವಿರೋಧ ಪಕ್ಷಗಳ ಪ್ರತಿರೋಧಕ್ಕಿಂತ ಸ್ವಪಕ್ಷೀಯರ ಬೆಂಬಲ ಕೊರತೆಯೇ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎದುರಿಸಬೇಕಾದಂತಹ ವಿಶಿಷ್ಟ ಸನ್ನಿವೇಶದಲ್ಲಿ . ಸೋಮವಾರದಿಂದ ವಿಧಾನಮಂಡಲ ಅಧಿವೇಶನ ಆರಂಭಗೊಳ್ಳಲಿದೆ.

ಸಚಿವ ಸಂಪುಟ ವಿಸ್ತರಣೆಗೆ ಅನುಮತಿ ಸಿಗದ ಕಾರಣಕ್ಕೆ ವಲಸಿಗ ಮತ್ತು ಮೂಲ ನಿವಾಸಿ ಶಾಸಕರು ಮುನಿಸಿಕೊಂಡಿದ್ದರೆ ನಿಗಮ-ಮಂಡಳಿ ನೇಮಕಾತಿ, ಮರಾಠಾ-ಲಿಂಗಾಯತ ನಿಗಮ ರಚನೆ ಸೇರಿದಂತೆ ಹಲವಾರು ಪ್ರಮುಖ ವಿಚಾರಗಳಲ್ಲಿ ತಮ್ಮನ್ನು ಪರಿಗಣಿಸಿಲ್ಲ ಎಂಬ ಹಿರಿಯ ಸಚಿವರ ಅಸಮಾಧಾನ ಮತ್ತು ಸಿಎಂ ಪುತ್ರ ಬಿ.ವೈ.ವಿಜಯೇಂದ್ರ ಹಸ್ತಕ್ಷೇಪ ಕುರಿತಂತೆ ಇರುವ ಅಸಮಾಧಾನವೂ ಸೇರಿದಂತೆ ಇಡೀ ಬಿಜೆಪಿ ಸಚಿವರು-ಶಾಸಕರು ಯಡಿಯೂರಪ್ಪ ವಿರುದ್ಧ ಅಸಮಾಧಾನ ಹೊಂದಿದ್ದಾರೆ.

ಇಂತಹ ಅಸಮಾಧಾನದ ನಡುವೆಯೂ ಬೆನ್ನಿಗಿರುವ ಕೆಲವೇ ಕೆಲವು ಸಚಿವರು ಮತ್ತು ಶಾಸಕರ ಪಡೆಯನ್ನಿಟ್ಟುಕೊಂಡು ಸಿಎಂ ಯಡಿಯೂರಪ್ಪ ಅಧಿವೇಶನಕ್ಕೆ ಸಿದ್ಧರಾಗಿದ್ದಾರೆ. ಮತ್ತೊಂದೆಡೆ ಒಡೆದ ಮನೆಯಾಗಿರುವ ಬಿಜೆಪಿ, ಸೋಮವಾರದಿಂದ ಆರಂಭವಾಗಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಗೋಹತ್ಯೆ ನಿಷೇಧ, ಲವ್ ಜಿಹಾದ್ ನಿಷೇಧದಂತಹ ಹೊಸ ಮಸೂದೆಗಳನ್ನೂ ಮಂಡಿಸಿ, ಪ್ರತಿಪಕ್ಷಗಳನ್ನು ಎದುರಿಸಬೇಕಾಗಿದೆ.

ಇದಲ್ಲದೇ ಕಳೆದ ಅಧಿವೇಶನದಲ್ಲಿ ಸುಗ್ರೀವಾಜ್ಞೆಯ ರೂಪದಲ್ಲಿರುವ ಎಪಿಎಂಸಿ ಹಾಗೂ ಭೂಸುಧಾರಣಾ ಕಾಯ್ದೆಯಂತಹ ಮಹತ್ವದ ಕಾಯ್ದೆಗಳ ತಿದ್ದುಪಡಿ ವಿಧೇಯಕವನ್ನೂ ಕೂಡ ಸರ್ಕಾರ ಕಾಯ್ದೆ ರೂಪಕ್ಕೆ ತರಬೇಕಾಗಿದೆ. ಇದಲ್ಲದೇ ಪ್ರವಾಹ, ಮಳೆ ಹಾನಿ, ಕೊರೊನ ನಿರ್ವಹಣೆ, ಕೋಮು ಗಲಭೆ ಮುಂತಾದ ವಿವಾದಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಸನ್ನದ್ಧವಾಗಿದೆ. ಆದರೆ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಬಿಜೆಪಿ ಸ್ಪಷ್ಟವಾಗಿ ಹಲವು ಗುಂಪುಗಳಲ್ಲಿ ಹರಿದು ಹಂಚಿ ಹೋಗಿದ್ದು, ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಕಲಾಪಗಳಲ್ಲಿ ಸರ್ಕಾರಕ್ಕೆ ಬೇಕಾದ ವಿಷಯಗಳನ್ನು ಚರ್ಚಿಸುವ ಸವಾಲು ಸಿಎಂ ಯಡಿಯೂರಪ್ಪ ಮುಂದಿದೆ.

ಸರ್ಕಾರದ ವೈಫಲ್ಯಗಳು ಹಾಗೂ ವಿವಾದಾತ್ಮಕ ಮಸೂದೆಗಳನ್ನು ವಿರೋಧಿಸಿ ಪ್ರತಿಪಕ್ಷ ಕಾಂಗ್ರೆಸ್ ಸರ್ಕಾರದ ವಿರುದ್ಧ ಧ್ವನಿ ಎತ್ತಿದರೆ ಆಡಳಿತ ಪಕ್ಷದ ಸಾಲಿನಿಂದ ಸೂಕ್ತ ಪ್ರತಿರೋಧ ತೋರದೇ ಹೋದರೆ ಸಿಎಂ ಯಡಿಯೂರಪ್ಪ ಮೇಲೆ ಶಾಸಕರಿಗೆ ವಿಶ್ವಾಸವಿಲ್ಲ ಎಂಬ ಸಂದೇಶ ಹೋಗುವ ಅಪಾಯವಿದೆ. ಇದನ್ನೇ ಕಾಂಗ್ರೆಸ್ ದಾಳವಾಗಿಸಿಕೊಂಡು ಸರ್ಕಾರದ ಮೇಲೆ ಮುಗಿ ಬೀಳಬಹುದು.

ಮತ್ತೊಂದು ಪ್ರತಿಪಕ್ಷ ಜೆಡಿಎಸ್ ಸ್ಪಷ್ಟಕ್ಕೆ ಬಿಜೆಪಿ ಮತ್ತು ಸಿಎಂ ಯಡಿಯೂರಪ್ಪ ಬಗೆಗೆ ಮೃದು ಧೋರಣೆ ತೋರಿದಂತೆ ಕಾಣುತ್ತಿದೆ. ಹೀಗಾಗಿ ಕಾಂಗ್ರೆಸ್ ಪಕ್ಷವನ್ನು ಸಮರ್ಥವಾಗಿ ಎದುರಿಸಬೇಕಾದ ಯಡಿಯೂರಪ್ಪಗೆ ಪಕ್ಷದ ವರಿಷ್ಠರ ಅವಕೃಪೆ ಇದೆ ಎಂಬ ಸಂದೇಶ ದಿನಗಳೆದಂತೆ ದಟ್ಟವಾಗುತ್ತಿರುವುದರಿಂದ ಈ ಬಾರಿಯ ಅಧಿವೇಶನ ಹೆಚ್ಚು ಮಹತ್ವ ಪಡೆದುಕೊಂಡಿದೆ.